ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 45/2019 .

ಪ್ರಾ.ಸಾ.ಃ1
ಚಾ.ಸಾ.ಃ1

ಹೆಸರು ಃ ನೆಲ್ಲೀರ ರಾಜೇಂದ್ರ
ತಂದೆಯ ಹೆಸರು ಃ ಲೇಟ್ ಉತ್ತಯ್ಯ
ವಯಸ್ಸು ಃ 42 ವರ್ಷ
ಉದ್ಯೋಗ ಃ ವ್ಯವಸಾಯ
ವಿಳಾಸ ಃ ಬಿರುನಾಣಿ

... ........................................................................................................... ...

ದಿನಾಂಕ 19 ನೇ ಸೆಪ್ಟೆಂಬರ್ 2022 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ ಃ -

ನನಗೆ ಬಿರುನಾಣಿ ಗ್ರಾಮದಲ್ಲಿ ಸರ್ವೆ ನಂ. 176/4 ಜಮೀನು ಇದೆ. ನನಗೆ ಆರೋಪಿ ಪರಿಚಯವಿದೆ, ದಿನಾಂಕ 04.02.2018 ರಂದು ಸಂಜೆ 6.20 ರಲ್ಲಿ ನಾನು ನಮ್ಮ ಕಾಫಿ ಕಣದಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿತರು ಬಂದು ಅವಾಚ್ಯ ಶಬ್ದಗಳಿಂದ ಬೈದರು. ಆರೋಪಿ 1 ನನ್ನ ಕೊರಳ ಪಟ್ಟಿ ಹಿಡಿದು ತನ್ನ ಬಲಗೈ ಇಂದ ನನ್ನ ಹಣೆಗೆ ಹೊಡೆದರು. ಆರೋಪಿ 2 ನನ್ನನ್ನು ಹಿಡಿದಿದ್ದರು. ಆಗ ಆರೋಪಿ 1 ಹೊಡೆದರು. 2 ನೇ ಆರೋಪಿ ಕಾಫಿ ದೊಣ್ಣೆಯಿಂದ ನನ್ನ ಹೊಟ್ಟೆಗೆ ಹೊಡೆದರು ಮತ್ತು ಕಾಲಿನಿಂದ ಒದ್ದರು. ಆರೋಪಿ ತಾನು ಬೆಂಗಳೂರಿನಿಂದ ರೌಡಿಗಳನ್ನು ಕರೆದುಕೊಂಡು ಬಂದು ಕೊಲೆ ಮಾಡುವುದಾಗಿ ನನಗೆ ಜೀವ ಬೆದರಿಕೆ ಹಾಕಿದರು. ಅದೇ ದಿನ ನಾನು ಶ್ರೀಮಂಗಲ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. ದಿನಾಂಕ 07.02.2018 ರಂದು ಪೊಲೀಸರು ಸ್ಥಳಕ್ಕೆ ಬಂದಿದ್ದರು. ಸ್ಥಳ ಮಹಜರ್ ಮಾಡಿ ಕಾಫಿ ದೊಣ್ಣೆಯನ್ನು ಅಮಾನತ್ತುಪಡಿಸಿದರು.

ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1 ಎ ಎಂದು, ಮಹಜರ್ ಅನು ನಿಪಿ 2 ಎಂದು, ಸಾಕ್ಷಿಯ ಸಹಿಯನು ನಿಪಿ 2 ಎ ಎಂದು ಗುರುತಿಸಲಾಯಿತು. ದೊಣ್ಣೆಯನ್ನು ಮು ಮಾ 1 ಎಂದು ಗುರುತಿಸಲಾಯಿತು. ನಮ್ಮ ಜಮೀನು ಸರ್ವೆ ನಂ. 176/4 ಎಂದು ಪೊಲೀಸರಿಗೆ ಮುಂದುವರಿದು ಹೇಳಿದ್ದೇನೆ.

<u>ಪಾಟೀ ಸವಾಲುಃ ಆರೋಪಿ 1 ರವರಿಂದ.</u>

ನಿಪಿ 1 ದೂರನ್ನು ನಾನೇ ಬರೆದಿರುತ್ತೇನೆ. ದಿನಾಂಕ 04.02.2018 ರಂದು ಸಂಜೆ 4.30 ರಲ್ಲಿ ಆರೋಪಿಯಾದ ನಾನು ಕಾಫಿ ಕಣದಲ್ಲಿ ನಿಂತು ಕಾಫಿ ತುಂಬುತ್ತಿರುವಾಗ ಗೇಟ್ ಮುಂದೆ ನಾನು ಕಾರು ನಿಲ್ಲಿಸಿ ಆರೋಪಿಯಾದ ನಿಮ್ಮನ್ನು ನಾನು ಕರೆದಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 6.30 ರಲ್ಲಿ ನಾನು ಆರೋಪಿಯಾದ ನಿಮಗೆ ಕೈ ಯಿಂದ ಹಲ್ಲೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವುತ್ತು ಅವಾಚ್ಯ ಶಬ್ದಗಳಿಂದ ಬೈದಿರುತ್ತೇನೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 6.30 ರಲ್ಲಿ ಆರೋಪಿಯಾದ ನಿಮ್ಮ ಆಸ್ತಿ ದಾಖಲಾತಿಗಳನ್ನು ರದ್ದುಪಡಿಸಿ ಹಿಸ್ಸೆ ತೆಗೆದುಕೊಳ್ಳುತ್ತೇನೆ ಎಂದು ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಾದ ನೀವು ಕಟ್ಟಿಸಿರುವ ಮನೆಯಲ್ಲಿ ನೀವು ವಾಸ ಮಾಡಲು ಬಿಡುವುದಿಲ್ಲ ಎಂದು ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯಾದ ನಿಮ್ಮ ಗೇಟ್ ಮುಂದೆ ನಿಂತು ನನಗೆ 6 ಸಾವಿರ ಬಿ ಜೆ ಪಿ ಕಾರ್ಯಕರ್ತರ ಸಹಕಾರ ಇದೆ ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ ಎಂದು ನಾನು ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಸಂಜೆ 6.45 ಕ್ಕೆ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನನಗೆ ಗಾಯ ಆಗಿರಲಿಲ್ಲ, ಆದರೆ ನೋವು ಇತ್ತು. ಆನಂತರ ನಾನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಹೋಗಿರುತ್ತೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರ ಹೆಸರು ಡಾ. ಅರ್ಜುನ್. ನನ್ನನ್ನು ಯಾವುದೇ ಪೊಲೀಸರು ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ, ನಾನೇ ಸ್ವತಃ ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಹೇಳಿದಂತೆ ಸರ್ವೆ ನಂ. 176/4 ನನಗೆ ಸೇರಿದ ಜಾಗ ಅಲ್ಲ ಎಂದರೆ ಸರಿಯಲ್ಲ.

ಸ್ಥಳ ಮಹಜರ್ ಮಾಡುವಾಗ ಸಾಕ್ಷಿದಾರರು ಹಾಜರಿದ್ದರು. ಅವರ ಹೆಸರು ನೆಲ್ಲೀರ ಸುಬ್ಬಯ್ಯ, ನೆಲ್ಲೀರ ಹರೀಶ್ ,ಕಳಕಂಡ ಉತ್ತಣ್ಣ.

ಆರೋಪಿ 2 ತಮ್ಮ ಪರ ಪಾಟೀ ಸವಾಲಿಗೆ ಸಮಯಾವಕಾಶ ಕೋರಿರುತ್ತಾರೆ.

<u>ಮರು ವಿಚಾರಣೆ ಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.